

## ಛಾಯಾಗ್ರಾಹಕರೆಂದರೆ ಹೆದರಿಕೆ!

ಸೆಲೆಬ್ರಿಟಿಗಳು ಎಲ್ಲಿ ಹೋದರೂ ಅವರ ಹಿಂದೆ ಛಾಯಾಗ್ರಾಹಕರ ಹಿಂಡು ಇದ್ದೇ ಇರುತ್ತದೆ. ಈ 'ಪಾಪಾರಾಜಿ'ಗಳ ಕಣ್ಣುತಪ್ಪಿಸಿ ಓಡಾಡುವುದು ಅವರಿಗೂ ದೊಡ್ಡ ಸವಾಲು. ರಾಜಕುಮಾರಿ ಡಯಾನಾ ಅಪಘಾತದಲ್ಲಿ ಬಲಿಯಾದದ್ದು ಛಾಯಾಗ್ರಾಹಕರಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಎಂಬುದು ಅಚ್ಚಳಿಯದ ಇತಿಹಾಸದ ದುರಂತ.

ಖಾಸಗಿತನಕ್ಕೆ ಅವಕಾಶ ನೀಡದಂತೆ ಮುತ್ತಿಕೊಳ್ಳುವ ಛಾಯಾಗ್ರಾಹಕರನ್ನು ಕಂಡರೆ ಹೆಚ್ಚಿನ ಸೆಲೆಬ್ರಿಟಿಗಳು ಹಾವು ಕಂಡವರಂತೆ ಓಡುತ್ತಾರೆ. ಛಾಯಾಗ್ರಾಹಕರೆಂದರೆ ಒಂದು ರೀತಿಯ ಭಯ ಎಂದಿದ್ದಾಳೆ ಪ್ರೀತಿ ಝಿಂಟಾ. ಅಮೆರಿಕದ ಹುಡುಗನೊಂದಿಗೆ ಸಂಸಾರ ಬಂಧನಕ್ಕೆ ಒಳಗಾಗಿರುವ ಪ್ರೀತಿ ಆಗಾಗ್ಗೆ ಮುಂಬೈ ಮತ್ತು ಲಾಸ್ ಏಂಜಲಿಸ್ ನಡುವೆ ಓಡಾಡುತ್ತಿರುತ್ತಾಳೆ. ಈ ಹಿಂದೆ ಮುಂಬೈನಲ್ಲಿಯೇ ನೆಲೆಸಿದ್ದಾಗಲೂ ಛಾಯಾಗ್ರಾಹಕರ ಕಾಟವಿತ್ತು. ಆದರೆ ಅದೀಗ ದುಪ್ಪಟ್ಟಾಗಿದೆ. ಈ ಕಾರಣದಿಂದಲೇ ಮುಂಬೈಗೆ ಕಾಲಿಡಲು ಪ್ರೀತಿ ಹೆದರುತ್ತಿದ್ದಾಳಂತೆ. 'ಮುಂಬೈಗೆ ಬರುವುದೆಂದರೆ ಮೊದಲಿನಂತೆ ಖುಷಿ ಕೊಡುವುದಿಲ್ಲ. ಛಾಯಾಗ್ರಾಹಕರು ಸುತ್ತುಗಟ್ಟುತ್ತಾರೆ. ಚಿತ್ರ ತೆಗೆಯಬೇಕೆಂದು ಯಾರೂ ವಿನೀತವಾಗಿ ಕೇಳುವುದೇ ಇಲ್ಲ. ಬದಲಾಗಿ ನಮ್ಮಲ್ಲಿ ಭಯ ಹುಟ್ಟಿಸುತ್ತಾರೆ' ಎಂದಿದ್ದಾಳೆ ಪ್ರೀತಿ.

ಈ ಹಿಂದೆ ಛಾಯಾಗ್ರಾಹಕರು ಸಭ್ಯತೆಯಿಂದ ವರ್ತಿಸುತ್ತಿದ್ದರು. ಅವರಲ್ಲಿ ಉತ್ತಮ ಗುಣವಿತ್ತು. ಅವರೊಂದಿಗೆ ಯಾವಾಗಲೂ ಮಾತನಾಡುತ್ತಿದ್ದೆ. ತಮಾಷೆ ಮಾಡುತ್ತಿದ್ದೆ. ಆದರೆ ಈಗ ಮುಖವಾಡ ತೊಟ್ಟುಬರುವಂತಾಗಿದೆ. ಇದು ಅವರ ಮೇಲಿನ ದೂರಲ್ಲ. ಕತ್ತಲಿನಿಂದ ಏಕಾಏಕಿ ಜನರ ಗುಂಪು ಸುತ್ತುವರಿದರೆ ಹೃದಯಾಘಾತವೇ ಆಗಿಬಿಡುತ್ತದೆ ಎಂದು ಟ್ವೀಟ್ ಮಾಡಿದ್ದಾಳೆ ಆಕೆ.

ಸೆಲೆಬ್ರಿಟಿಯಾಗಿ ಖಾಸಗಿತನಕ್ಕೆ ಅವಕಾಶ ಕೋರುವುದು ಬಾಲಿಶವಾಗುತ್ತದೆ. ಆದರೆ ಶಿಷ್ಟಾಚಾರ ಮತ್ತು ಸಭ್ಯತೆಯಿರಬೇಕಲ್ಲವೇ? ಭಯ ಹುಟ್ಟಿಸುವ ಬದಲು ವಿಧೇಯತೆಯಿಂದ ಕೇಳುವ ವಿಧಾನವೂ ಇರುತ್ತದೆಯಲ್ಲವೇ? ಎಂದು ಬೇಸರದಿಂದ ಹೇಳಿಕೊಂಡಿದ್ದಾಳೆ ಪ್ರೀತಿ.

## ವೈಯಕ್ತಿಕ ವಿಚಾರ ಮಾತನಾಡಲಾರೆ

ದೀಪಿಕಾ ಪಡುಕೋಣೆಯಿಂದ ದೂರವಾದ ಬಳಿಕ ರಣಬೀರ್ ಕಪೂರ್ ಸ್ನೇಹ ಬೆಳೆಸಿಕೊಂಡದ್ದು ಕತ್ರೀನಾ ಕೈಫ್ ಜತೆ. ಇನ್ನೇನು ಇಬ್ಬರೂ ಮದುವೆ ಆಗಿಯೇ ಬಿಟ್ಟರು ಎನ್ನುತ್ತಿರುವಾಗಲೇ ಇದ್ದಕ್ಕಿದ್ದಂತೆ ಕ್ಯಾಟ್–ರಣಬೀರ್ ಜೋಡಿ ದೂರವಾಯಿತು. ಹೀಗೆ ಏಕಾಏಕಿ ಬಿರುಕು ಮೂಡಲು ಕಾರಣ ಏನೆಂಬುದನ್ನು ಇಬ್ಬರೂ ಹೇಳಿಕೊಂಡಿಲ್ಲ. ಅವರ ಆಪ್ತರ ವಲಯದಿಂದಲೂ ಖಚಿತ ಸುದ್ದಿ ಹೊರಬಂದಿಲ್ಲ. ಅದರಲ್ಲಿಯೂ ಕ್ಯಾಟ್, ಶತಾಯಗತಾಯ ಯಾವ ಕಾರಣಕ್ಕೂ ತನ್ನ ಪ್ರೇಮಕಥೆಯ ಕುರಿತು ಬಾಯಿ ಬಿಡಬಾರದು ಎಂದು ಸ್ವಯಂ ನಿರ್ಬಂಧ ಹಾಕಿಕೊಂಡಿದ್ದಾಳೆ. ಆಕೆಯಿಂದ ವಿಷಯ ಕೆದಕುವ ಪ್ರಯತ್ನಗಳೂ ವಿಫಲವಾಗಿವೆ. ಇತ್ತೀಚೆಗೆ ಸಂದರ್ಶನವೊಂದರಲ್ಲಿ, 'ಸಂಬಂಧಗಳೇ ನಿಮ್ಮ ಕೆಲಸಗಳನ್ನು ಕಸಿದುಕೊಳ್ಳುತ್ತಿವೆ ಎಂಬ ಮಾತಿದೆಯಲ್ಲ' ಎಂಬ ಪ್ರಶ್ನೆ ಎದುರಾಯಿತು. ಅದಕ್ಕೆ ಕ್ಯಾಟ್ ನೀಡಿದ ಉತ್ತರ ಹೀಗಿತ್ತು– 'ನಾನು ಉದ್ಯಮಕ್ಕೆ ಕಾಲಿಟ್ಟ ಸಮಯದಿಂದಲೂ ಒಂದೇ ಉತ್ತರ ನೀಡುತ್ತಿದ್ದೇನೆ. ನನ್ನ ವೈಯಕ್ತಿಕ ಬದುಕಿನ ಕುರಿತು ಮಾತನಾಡುವುದಿಲ್ಲ ಎಂದು ಹೇಳುತ್ತಾ ವರ್ಷಗಳೇ ಉರುಳಿವೆ. ಇದಕ್ಕೆ ಅನೇಕ ಕಾರಣಗಳಿವೆ. ಅವುಗಳನ್ನು ವಿವರಿಸಲೂ ಆಗುವುದಿಲ್ಲ. ನನ್ನ ಪ್ರಕಾರ ಸರಿಯಾದುದ್ದನ್ನೇ ಮಾಡುತ್ತಿದ್ದೇನೆ. ಇದನ್ನೇ ಮುಂದುವರಿಸುತ್ತೇನೆ'.

ತಾನು ತುಂಬಾ 'ರಿಸರ್ವ್‌ಡ್' ಎಂದು ಹೇಳಿಕೊಳ್ಳುತ್ತಾಳೆ ಕ್ಯಾಟ್. ಈ ಕಾರಣಕ್ಕಾಗಿಯೇ ಉಳಿದ ನಟ–ನಟಿಯರಂತೆ ಆಕೆ ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಂಡಿರಲಿಲ್ಲ. ಇತ್ತೀಚೆಗಷ್ಟೇ ಕ್ಯಾಟ್ ಫೇಸ್‌ಬುಕ್‌ನಲ್ಲಿ ಅಧಿಕೃತ ಪುಟ ತೆರೆದಿದ್ದಾಳೆ. 'ಮನೆಗೆ ಮರಳಿದಾಗ ನಾವು ಸಾಮಾನ್ಯ ವ್ಯಕ್ತಿ. ಅದು ನಾವಿರಬೇಕಾದ ಬಗೆ ಎಂಬ ಮಾತನ್ನು ನಾನು ನಂಬುತ್ತೇನೆ. ಆದರೆ ಜಗತ್ತು ಚಲಿಸುತ್ತಿರುವಾಗ ನಮಗೊಂದು ವೇದಿಕೆ ಕಲ್ಪಿಸಿಕೊಳ್ಳುವುದು ಸಹ ಅಗತ್ಯ. ನನಗೆ ಅನಿಸಿದ್ದನ್ನು ಹಂಚಿಕೊಳ್ಳುವ, ಪ್ರಕಟಿಸುವ ಜಾಗ ಬೇಕಿತ್ತು. ಇತರರಂತೆ ನಿರಂತರವಾಗಿ ಫೇಸ್‌ಬುಕ್ ಬಳಸದಿದ್ದರೂ ಆಗಾಗ್ಗೆ ಜನರೊಂದಿಗೆ ಸಂವಾದ ಮಾಡಲು, ಏನನ್ನಾದರೂ ಹೇಳಲು ಅಲ್ಲಿ ಕಾಣಿಸಿಕೊಳ್ಳುತ್ತೇನೆ' ಎಂದಿದ್ದಾಳೆ.

ಮೊದಲಿನಿಂದಲೂ ಮಾಧ್ಯಮ ಮತ್ತು ಜನರಿಂದ ತುಸು ದೂರವೇ ಇರುತ್ತಿದ್ದ ಕ್ಯಾಟ್, ಈಗಂತೂ ಬಲು ದೂರವೇ ಆಗಿದ್ದಾಳೆ. ಪ್ರೇಮಾಘಾತದ ನೋವನ್ನು ಕೆದಕುತ್ತಾರೆ ಎಂಬ ಸಲುವಾಗಿ ಆಕೆ ಸುದ್ದಿಮಿತ್ರರಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾಳೆ. ತಣ್ಣಗೆ ಸಿನಿಮಾ ಮಾಡಿಕೊಂಡು ಹೋಗುವ ನೀತಿ ಪಾಲಿಸುತ್ತಿದ್ದಾಳೆ.



■ ಅಮಿ